## ಮುಗಿದ ಮೇಲೂ ಬೆಳೆಯುವ ಕಥೆ!

‘ಜೈ ಭೀಮ್’ (ಫೆ. 20, ಬಿ.ಎಲ್. ವೇಣು) ಕಥೆ ಹಲವು ನೆಲೆಯಲ್ಲಿ ಚಿಂತನೆಗೆ ಈಡು ಮಾಡುತ್ತದೆ. ಕಥೆಯ ಅಂತ್ಯವಂತೂ ರೋಚಕವಾಗಿದ್ದು, ‘ಮನುಷ್ಯ ಕುಲ ಒಂದೇ’ ಎಂಬ ನಂಬಿಕೆಯ ಮೇಲೆ ರೂಪುಗೊಂಡಿರುವ ಸಂವಿಧಾನದ ಆಶಯಕ್ಕೆ ಪೂರಕವಾಗಿದೆ. ಈ ದೇಶದಲ್ಲಿ ಈಗಲೂ ಗ್ರಾಮ ಜಗತ್ತಿನಲ್ಲಿ ಅನೂಚಿತವಾಗಿ ಜಾರಿಯಲ್ಲಿರುವ ‘ಜಾತಿ ಪದ್ಧತಿ’ಯನ್ನು ನಿರ್ಮೂಲನೆ ಮಾಡಬೇಕಾಗಿರುವ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳುತ್ತದೆ! ಮೇಲ್ವರ್ಗದ ಜನರ ಜಾತಿ ವಿಚಾರದಲ್ಲಿನ ಹೀನ ಮನಸ್ಥಿತಿಗೆ ಈ ಕಥೆ ಕನ್ನಡಿ ಹಿಡಿಯುತ್ತದೆ. ಜೊತೆಗೆ, ಜಾತಿ ವಿಚಾರದಲ್ಲಿ ಕಾಲ ಮೊದಲಿನಂತಿಲ್ಲ ಎಂಬ ಸೂಕ್ಷ್ಮ ಸಂದೇಶವನ್ನು ದಾಟಿಸುತ್ತದೆ! ಕಥೆ ಮುಗಿದ ಮೇಲೂ ಬೇರೆ ಬೇರೆ ನೆಲೆಗಳಲ್ಲಿ ಓದುಗನಲ್ಲಿ ಬೆಳೆಯುತ್ತ ಹೋಗುತ್ತದೆ.



—ಕಲ್ಲೇಶ್ ಕುಂಬಾರ್, ಹಾರೂಗೇರಿ

## ಸಂವೇದನೆ ಬೇಕಿದೆ

‘ಶರಾವತಿ ನದಿಯನ್ನೇಕೆ ಕೊಲ್ಲುವಿರಿ?’ (ಫೆ. 13, ಅಖಿಲೇಶ್ ಚಿಪ್ಪಳಿ) ಲೇಖನ ಶರಾವತಿಯ ನೋವನ್ನು ಓದುಗರಲ್ಲಿ ಮೂಡಿಸುತ್ತದೆ. ಶರಾವತಿಯನ್ನು ಅವಲಂಬಿಸಿದ ಜನರ ಪಾಡು, ಮತ್ತಷ್ಟು ಮುಳುಗಡೆಯಾಗುವ ದಟ್ಟಾರಣ್ಯ, ಪರ್ಯಾಯ ಮಾರ್ಗಗಳು, ಇತಿಹಾಸದಲ್ಲಿ ತೆರವಾದ ಅಣೆಕಟ್ಟುಗಳು ಎಲ್ಲದರ ಸಮಗ್ರ ಮಾಹಿತಿ ನೀಡಿರುವ ಉತ್ತಮ ಬರಹ ಆಡಳಿತ ವರ್ಗಕ್ಕೆ ಸಂವೇದನೆ ತರಬೇಕಿದೆ.

—ವಿನು ಗಂಗೆ

## ಹೆಮ್ಮೆಯ ವಿಷಯ

‘ಅನಂತದಿಂ ದಿಗಂತದಿಂ’ (ಫೆ. 13, ವಿಶಾಖ ಎನ್.) ಲೇಖನ ಚೆನ್ನಾಗಿದೆ. ಕನ್ನಡದಲ್ಲಿ ಹಾಗೂ ಹಲವು ಭಾಷೆಗಳ ಚಿತ್ರಗಳಲ್ಲಿ ಸ್ಮರಣೀಯ ಅಭಿನಯದಿಂದ ತಮ್ಮದೇ ಗುರುತನ್ನು ಮೂಡಿಸಿರುವ ನಮ್ಮ ಹೆಮ್ಮೆಯ ಹಿರಿಯ ನಟ ಅನಂತನಾಗ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಬಂದಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆ ತರುವ ವಿಷಯ.

—ಬಿ. ಮನೋಹರ, ಚಳ್ಳಕೆರೆ



## ಕ್ರಿಯಾಶೀಲತೆಗೆ ಭೇಷ್!

‘ಅಂಗೈ ಪರದೆಯಲ್ಲಿ ರಂಜನೆಯ ಮಹಾಪೂರ’ (ಫೆ. 20, ವಿಶಾಖ ಎನ್.) ಲೇಖನ ಈ ಕಾಲದ ಮನರಂಜನೆಯ ಹೊರಳನ್ನು ಪರಿಚಯಿಸಿದೆ. ಕೆಲವೇ ವರ್ಷಗಳಲ್ಲಿ ನೋಡನೋಡುತ್ತಿದ್ದಂತೆ ಯೂಟ್ಯೂಬ್ ಎಂಬ ಮಾಯಾಲೋಕ ಯಾವ ಮಟ್ಟದಲ್ಲಿ ಬೆಳೆದುಬಿಟ್ಟಿದೆ ಎಂದು ಅಚ್ಚರಿಯೂ ಆಗುತ್ತದೆ. ಎಲ್ಲದಕ್ಕೂ ಒದಗಿಬರುವ ಯೂಟ್ಯೂಬ್ ಈಗೀಗ ಅನಿವಾರ್ಯವೂ ಆಗುತ್ತಿದೆ.

ಹಾಸ್ಯದೌತಣವಂತೂ ಜಬರ್‌ದಸ್ತ್ ಆಗಿ ಸಿಗುತ್ತಿದೆ. ಉತ್ತರ ಕರ್ನಾಟಕದ ಮಂದಿ ತಮ್ಮ ಸುಂದರ ಭಾಷೆಯೊಂದಿಗೆ ಹಾಸ್ಯವನ್ನು ಪ್ರಸ್ತುತಪಡಿಸುತ್ತಿರುವ ಶೈಲಿಯೇ ಬಹಳ ಸೊಗಸಾಗಿರುತ್ತದೆ. ಅದರಲ್ಲಿಯೂ ಕ್ರಿಯಾಶೀಲತೆಯಿಂದ ಯೋಚಿಸಿ ರೂಪಿಸುವ ಹಾಸ್ಯದ ಪ್ರಸಂಗಗಳನ್ನು ನೋಡಿದರೆ ಭೇಷ್ ಎಂದು ಹೇಳಬೇಕೆನಿಸುತ್ತದೆ. ಯೂಟ್ಯೂಬ್, ಮನರಂಜನೆಯೊಂದಿಗೆ ಹಣ ಸಂಪಾದನೆಯ ದಾರಿಯೂ ಆಗಿರುವುದು ಉತ್ತಮ ಬೆಳವಣಿಗೆ ಎಂದೇ ಹೇಳಬಹುದು. ಕಾಲಕ್ಕೆ ತಕ್ಕಂತೆ ಮನರಂಜನೆ, ತಂತ್ರಜ್ಞಾನ, ಆಲೋಚನೆ ಬದಲಾಗಿರುವುದು ಗಮನಿಸಬೇಕಾದ ಸಂಗತಿ.

—ಮಾನಸಾ ಎಂ., ಮೈಸೂರು

## ಜೀವ ಪ್ರಭೇದದ ಅಳಿವು- ಉಳಿವು

‘ಹೆಣ್ಣು ಮೊಸಳೆಗೆ ಗಂಡು ಬೇಕು’ (ಫೆ. 20, ಗುರುರಾಜ ಎಸ್. ದಾವಣಗೆರೆ) ತಲೆಬರಹ ಚಿಂತನೆಗೆ ಹಚ್ಚಿತು. ಮೇಲ್ನೋಟಕ್ಕೆ ಇದು ಏನೋ ಇರಬಹುದು ಎಂದು ಸುಮ್ಮನಾಗುವ ವಿಷಯವಲ್ಲ. ಒಂದು ಜೀವಪ್ರಭೇದದ ಅಳಿವು ಉಳಿವಿನ ಪ್ರಶ್ನೆ. ಮುಂದಿನ ದಿನಗಳಲ್ಲಿ ಕೆಲವು ಜೀವ ಸಂಕುಲಕ್ಕೆ ಹೆಣ್ಣು, ಗಂಡು ಹುಡುಕಬೇಕಾದೀತು. ಮನುಷ್ಯರಲ್ಲೂ ಮದುವೆಗೆ ಹೆಣ್ಣು ಸಿಗುತ್ತಿಲ್ಲ ಎಂಬ ಚಿಂತೆ ಇದೆ. ಇಲ್ಲೂ ಹೀಗೇ ಅನಿಸಿತು.

—ಸುಮಾವೀಣಾ, ಹಾಸನ

## ಅಪರೂಪದ ಪ್ರಭೇದ ಉಳಿಯಲಿ

ಶೀರ್ಷಿಕೆಯಿಂದಲೇ ಗಮನಸೆಳೆದ ಲೇಖನ. ತನ್ನ ಇರುವನ್ನು ಸಾಬೀತುಪಡಿಸಲು ಮೊಸಳೆಯು ಆಗಾಗ ಕಾಣಿಸಿಕೊಳ್ಳುವುದಲ್ಲದೆ ತನಗೆ ಸಂಗಾತಿಯ ಅವಶ್ಯಕತೆಯನ್ನು ಮನಗಾಣಿಸಿದೆ. ಶೀಘ್ರದಲ್ಲಿಯೇ ಈ ಹೆಣ್ಣು ಮೊಸಳೆಗೆ ಸಂಬಂಧಪಟ್ಟ ಅಧಿಕಾರಿಗಳು ಗಂಡು ಮೊಸಳೆಯನ್ನು ಬ್ರಹ್ಮಪುತ್ರ ನದಿ ಪಾತ್ರದಲ್ಲಿ ಬಿಡುವತ್ತ ತಮ್ಮ ಚಿತ್ತಹರಿಸಲಿ. ಕಣ್ಮರೆಯಾಗುತ್ತಿರುವ ಅಪರೂಪದ ಜೀವ ಪ್ರಭೇದದ ಸಂತತಿ ಮುಂದುವರಿಯಲಿ.

—ಉಷಾಲಕ್ಷ್ಮಿ ಅರವಿಂದ ಹೊಳ್ಳ

## ವೈರುಧ್ಯಗಳ ಮುಖಾಮುಖಿ

ಆಮೆಯೋ? ಮೊಲವೋ? (ಫೆ. 20, ಹರಿಪ್ರಸಾದ್ ಬೇಸಾಯಿ) ಅತಿ ಆಪ್ತವಾದ ನಿರೂಪಣೆಯಿಂದ ಕೂಡಿದೆ. ಎರಡು ವೈರುಧ್ಯಗಳನ್ನು ಮುಖಾಮುಖಿಯಾಗಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಲೌಕಿಕ ಯಶಸ್ಸಿನಲ್ಲಿ ಮುಳುಗಿರುವ ವ್ಯಕ್ತಿತ್ವ ಒಂದೆಡೆಯಾದರೆ, ಆಳವಾದ ಪ್ರೀತಿ, ಸಹಾನುಭೂತಿ ಹಾಗೂ ವೇಗದ ಬದುಕು ಮತ್ತೊಂದೆಡೆ. ಇದೆಲ್ಲಕ್ಕೂ ರೂಪಕದಂತಿದೆ ವಾಹನದ ವೇಗ. ಇಂಥ ಪರಿಣಾಮಕಾರಿ ಹಾಗೂ ಸ್ಮರಣೀಯ ಬರಹ ಕೊಟ್ಟ ಲೇಖಕರಿಗೆ ಧನ್ಯವಾದಗಳು.

—ಡಾ. ಓಂ ಪ್ರಕಾಶ್



## ‘ನಿಧಾನವೇ ಪ್ರಧಾನ’

‘ಪತ್ರಸಂಸ್ಕೃತಿ’ ಪತ್ರ ರೂಪದ ಲೇಖನ ಮನಮುಟ್ಟುವಂತಿದೆ. ಇಂದಿನ ವೇಗದ ಬದುಕಿನ ಓಟದಲ್ಲಿ ನಾವು ಏನನ್ನೋ ಕಳೆದುಕೊಂಡಿದ್ದೇವೆ ಅನಿಸಿತು. ‘ನಿಧಾನವೇ ಪ್ರಧಾನ’ ಎಂಬ ನಾಣ್ಣುಡಿ ಕೂಡ ನೆನಪಾಯಿತು.

—ಸವಿತಾ ಮಂಜುನಾಥ್

## ಆಪ್ತ ಬರಹ

ವೇಗದ ಯುಗದಲ್ಲಿ ಅಂದಿನ ಕಾಲಮಾನದ ಭಾವುಕ ಅನುಬಂಧಗಳ ಅನುಭವಗಳನ್ನು ನೆನಪು ಮಾಡಿಕೊಟ್ಟ ಆಪ್ತಬರಹ.

—ವೀರೇಶ್ ಸಿ.ಎಸ್.

## ಹೃದಯ ತಟ್ಟಿದ ಪತ್ರ

ಈಗ ಪತ್ರ ಬರೆಯುವ ಸಂಸ್ಕೃತಿ ಮರೆಯಾಗಿ ನೆನಪುಗಳ ದಾಖಲೆ ಆಗದೆ ಇರುವುದು ವಿಷಾದನೀಯ ಸಂಗತಿ. ‘ಪತ್ರಸಂಸ್ಕೃತಿ’ ಬರಹದಲ್ಲಿ ಗೆಳೆಯನ ವೃತ್ತಾಂತದಲ್ಲಿ ಮೂಡಿಬಂದ ಘಟನೆಗಳು ಹೃದಯ ತಟ್ಟಿದವು. ಭಾವನೆಗಳ ಬಂಧದಲ್ಲಿ ಓದುಗರನ್ನ ಸೆಳೆಯಿತು.

—ಮೈ. ಸತೀಶಕುಮಾರ, ಬಂಗಾರಪೇಟೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in